# ಆರ್.ಬಸವರಾಜ್‌ಅವರ 'ಈಸೂರಿನ ಚಿರಂಜೀವಿಗಳು'

*ರಮೇಶ್ ಸಿ, ಪಿ ಎಚ್ ಡಿ ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಪ್ರವೇಶ**

ಮಹಾತ್ಮಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿಇಡೀ ಭಾರತವೇಎಚ್ಚೆತ್ತು ಹೋರಾಡಿತು. ಹಳ್ಳಿಯಿಂದ ದಿಲ್ಲಿಯವರೆಗೆ ಹರತಾಳ, ಅಸಹಕಾರ, ಸ್ವರಾಜ್ಯ ಸ್ಥಾಪನೆಯ ಪ್ರಯತ್ನಗಳ ಮಹಾಪೂರವೇ ಹರಿಯಿತು. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಪುಟ್ಟಗ್ರಾಮಈಸೂರು. ಶಿಕಾರಿಪುರಕ್ಕೆ ಕೇವಲ 8 ಕಿ.ಮೀ.ದೂರ. ಮಲೆನಾಡಿನ ಮಡಿಲಲ್ಲಿ ಹಸಿರು ವನಸಿರಿಯ ಮಧ್ಯೆ ಪ್ರಶಾಂತವಾಗಿ ಮಲಗಿರುವ ಈಸೂರಿನಜನರಲ್ಲಿ ಸ್ವಾತಂತ್ರ್ಯ ಪ್ರಜ್ಞೆಜಾಗೃತಗೊಂಡಿತು.ಅಬಾಲ ವೃದ್ಧರಾದಿಯಾಗಿಈಸೂರಿನಜನ ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡರು.ಈಸೂರಿಗೆ ಸ್ವತಂತ್ರ ಸರ್ಕಾರ ಘೋಷಿಸಿಕೊಂಡು, ಆಳರಸರ ಅಂದರೆ ಬ್ರಿಟೀಷರ ವಿರುದ್ಧ ಸೆಟೆದು ನಿಂತರು.ಬ್ರಿಟೀಷರ ದಬ್ಬಾಳಿಕೆಗೆ ಮಣಿಯದತಮ್ಮಅಪ್ರತಿಮತ್ಯಾಗ, ಬಲಿದಾನಗಳ ಮೂಲಕ ಈಸೂರಿನ ಹೆಸರನ್ನುಅಂತರರಾಷ್ಟ್ರೀಯ ನಕ್ಷೆಗೆತಂದು 'ಹುತಾತ್ಮರಾದಐವರು ಕಲಿಗಳ ಸಾಹಸಕಥೆಕಾದಂಬರಿಯೇ 'ಈಸೂರಿನ ಚಿರಂಜೀವಿಗಳು'.

ಈ ಕಾದಂಬರಿಯಲ್ಲಿ ವ್ಯಕ್ತಿಗಳಿಗಿಂತ ಘಟನೆಗಳೇ ಮುಖ್ಯಎಂದು ಲೇಖಕರು ಹೇಳಿದ್ದಾರೆ ನಿಜ, ಐತಿಹಾಸಿಕ ಮಹತ್ವವನ್ನು ಪಡೆದಕೃತಿಇದಾಗಿದೆ. ಆದರೆ ಲೇಖಕರಯಶಸ್ಸುಇರುವುದು ಈ ರಾಜಕೀಯ ಘಟನೆಗಳಲ್ಲೇ. ಈ ಘಟನೆಗಳು ವ್ಯಕ್ತಿಗಳ ಅಂತರಂಗವನ್ನುತೆರೆದುತೋರಿಸುವುದು ಮಾತ್ರವಲ್ಲ,

ವ್ಯಕ್ತಿಗಳನ್ನು ರೂಪಿಸುತ್ತಾ, ಬೆಳೆಸುತ್ತಾ ಹೋಗುತ್ತವೆ. ಸ್ವಾತಂತ್ರ್ಯ ಚಳುವಳಿಯ ಬಿಸಿ ಈಸೂರಿನಂತಹ ಪುಟ್ಟಗ್ರಾಮವನ್ನೂತಾಕಿತು.ಬಿಸಿ ಬೆಂಕಿಯಾಯಿತು, ದಳ್ಳುರಿಯಾಯಿತು, ಕಾಡುಕಪ್ಪಾಯಿತು, ಅಂತಹ ಸಂದರ್ಭದಲ್ಲಿ ಪುಟ್ಟಗ್ರಾಮವೊಂದು ಬ್ರಿಟೀಷ್ ಆಡಳಿತಕ್ಕೆ ವಿರುದ್ಧವಾಗಿ ಸಿಡಿದು ನಿಂತುತಮ್ಮದೇ ಪ್ರತಿ ಸರ್ಕಾರವನ್ನು ರಚಿಸಿಕೊಂಡಿತಲ್ಲ ಈ ಘಟನೆಯನ್ನೇಚಿಂತಿಸಬಹುದು.

ಸ್ವಾತಂತ್ರ್ಯ ಹೋರಾಟದಲ್ಲಿಊರ ಹಿರಿಯರು, ಗೌರವಾನ್ವಿತರು, ಸರ್ಕಾರದ ಪ್ರಮುಖರು ಸಹಜವಾಗಿ ಭಾಗವಹಿಸುವುದನ್ನುಕಾಣುತ್ತೇವೆ. (ಅಮಲ್ದಾರ್, ಪೊಲೀಸ್‌ಇನ್ಸ್‌ಪೆಕ್ಟರ್), ಆದರೆಇಲ್ಲಿಇಬ್ಬರು ಬಾಲಕರುಜಯಣ್ಣ, ಮಲ್ಲಣ್ಣಅಂತಹಗುರುತರಜವಾಬ್ದಾರಿಯನ್ನು ಹೊರುತ್ತಾರೆ.ಹಿರಿಯ ಮುಖಂಡರಾದರೆ ಸರ್ಕಾರ ಹಿಡಿದು ಹಾಕುತ್ತದೆ, ಸೆರೆಮನೆಗೆ ತಳ್ಳುತ್ತದೆ, ಚಳುವಳಿಯು ಮಾರ್ಗದರ್ಶಕರಿಲ್ಲದೆ ಹೋಗುತ್ತದೆ ಎಂಬ ವ್ಯಾವಹಾರಿಕಕಾರಣವೇನೋ ಈ ಸಂದರ್ಭದಲ್ಲಿ ಸರಿಯೇಆದರೆಅಂತಹಘಟನೆಯ ಪರಿಣಾಮದರಮಣೀಯತೆಯನ್ನು ಲೇಖಕರು ಬೇರೊಂದುರೀತಿಯಲ್ಲಿ ಬಳಸಿಕೊಂಡಿದ್ದಾರೆ.ಈ ಘಟನೆ ಈ ಆಯ್ಕೆ ಆ ಬಾಲಕರ ವ್ಯಕ್ತಿತ್ವವನ್ನು ಬೆಳೆಸುತ್ತದೆ.ಬಾಲಕರ ಸ್ವಾಭಿಮಾನ, ರಾಷ್ಟ್ರಪ್ರೇಮ, ನಾಯಕತ್ವದ ಪ್ರಮುಖಗುಣವಾದ ನಿರ್ಭೀತಿ, ಸಂಘಟನಾ ಕುಶಲತೆಗಳನ್ನು ಲೇಖಕರು ಪರಿಚಯಿಸುತ್ತಾರೆ.ಅಡುಗೆ ಮನೆಯಲ್ಲೋ, ಹೊಲದಲ್ಲೋಆಡುತ್ತಲೋ ಕಳೆ ಕೀಳುತ್ತಲೋ ಅಥವಾಕಾಡು ಹರಟೆಯಲ್ಲೋ ಬದುಕು ಸವೆಸುವ ಹೆಂಗಳೆಯರು ಹೇಗೆ ನೋಡುನೋಡುತ್ತಾ ಸಶಕ್ತ ವ್ಯಕ್ತಿಗಳಾಗಿ ಮೈದುಂಬಿ ಬೆಳೆದರು ಎಂಬುದನ್ನುಕಾದಂಬರಿತುಂಬಾ ಕುಶಲವಾಗಿ ನಿರೂಪಿಸುತ್ತದೆ.ಘಟನೆಗಳು ಹಾಗಿರಲಿ, ಈ ಕಾದಂಬರಿಯಲ್ಲಿ

ವರ್ಣಿತವಾದ ವೀರಭದ್ರಸ್ವಾಮಿದೇವಾಲಯವೇಒಂದು ಪಾತ್ರವಾಗಿಬಿಟ್ಟಿದೆ.ಈಸೂರಿನ ಪ್ರಮುಖ ಘಟನೆಗಳೆಲ್ಲದಕ್ಕೂ ಅದು ಪ್ರತ್ಯಕ್ಷ ಸಾಕ್ಷಿ. ವೀರಭದ್ರಊರುಕಾಯುವ ಹೆದ್ದೈವ. ಆತನ ಸಮ್ಮುಖದಲ್ಲಿ ಹರಿಕಥೆ, ಕೀರ್ತನೆ, ಆ ನೆಪದಲ್ಲಿರಾಷ್ಟ್ರದರಾಜಕೀಯ ವಿಶ್ಲೇಷಣೆ, ಕ್ರಾಂತಿಗೆ ಪ್ರಚೋದನೆ, ಪ್ರತಿ ಸರ್ಕಾರ ಸ್ಥಾಪನೆ, ಆಳರಸರ ಅಧಿಕಾರಿಗಳಿಗೆ ಶಿಕ್ಷೆ.ಅವರ ಪ್ರತೀಕಾರಎಲ್ಲವೂಢಣ್‌ಢಣ್‌ಢಣ್ ಎಂಬ ಜಾಗಟೆಯ ಸದ್ದು ಕೇಳಿದರೆ ಸಾಕು, ಇಡಿಯಕಥೆಗೆ ಚಾಲನೆ ದೊರೆಯುತ್ತದೆ.ಸರಸರನೆಘಟನೆಯ ಮಾಲೆಕಟ್ಟಿಕೊಂಡು ವೀರಭದ್ರಸ್ವಾಮಿಯ ಕೊರಳಿಗೆ ಅಲಂಕಾರವಾಗಿಬಿಡುತ್ತದೆ.ಕಥೆ ಮುಂದುವರಿಯುತ್ತಾಓದುಗರಲ್ಲಿ

ರೋಮಾಂಚನ, ಆತಂಕ, ಭೀತಿ, ಅಭಿಮಾನ, ವಿಷಾದ ವಿವಿಧ ಭಾವಗಳನ್ನು ಉದ್ದೀಪಿಸುತ್ತದೆ.ರಸೋತ್ಕಟತೆತನಗೆತಾನೆ ಸಿದ್ಧಿಸುತ್ತದೆ.

ಕಥೆ ನಡೆಯುವುದು ಶಿಕಾರಿಪುರ ತಾಲ್ಲೂಕಿನಈಸೂರಿನಲ್ಲಿ ಪುಟ್ಟಗ್ರಾಮೀಣ ಪರಿಸರದಲ್ಲಿ.ಲೇಖಕರು ಈ ಮಾತನ್ನುಯಾವಕ್ಷಣದಲ್ಲೂ ಮರೆಯುವುದಿಲ್ಲ. ಗ್ರಾಮೀಣ ವಾತಾವರಣವನ್ನುಕಟ್ಟಿಕೊಡುವುದರಲ್ಲಿ ಭಾಷೆಯ ಸೊಗಡಿನಲ್ಲಿ ಈ ಅಂಶ ಎದ್ದುಕಾಣುತ್ತದೆ.ಜಾಗಟೆಯ 'ಢಣ್‌ಢಣ್‌ಢಣ್' ಸದ್ದಿನ ವಿದ್ಯುತ್ ಸಂಚಲನೆಯನ್ನುಅವರು ವರ್ಣಿಸುವುದು ಹೀಗೆ, 'ಅಗೋ ಜಾಗಟೆಯ ಸದ್ದು!' ಎಲ್ರೂ ವೀರಭದ್ರದೇವಸ್ಥಾನದಲ್ಲಿ ಸೇರಿದಾರೆಅಂತಕಾಣುತ್ತೆ.ತಡಮಾಡ –ಬ್ಯಾಡಿ, ಓಡಿ...ಓಡಿ...'.

ನೇಗಿಲು ಹೊತ್ತು ಹೊಲದಿಂದ ಹೊರಟಿದ್ದರೈತರು ಬೇಗಬೇಗ ಹೆಜ್ಜೆ ಹಾಕಿದರು.ತಲೆಯ ಮೇಲೆ ಭಾರದ ಹೊರೆ ಹೊತ್ತವರೂ ನಡಿಗೆಯ ವೇಗವನ್ನು ತೀವ್ರಗೊಳಿಸಿದರು.ದನಗಳ ಹಿಂಡನ್ನುಅಟ್ಟಿಕೊಂಡು ಬರುತ್ತಿದ್ದ ಹುಡುಗರು 'ಗ್ಯಾಹೂ ಅಲಲಲಾ' ಎನ್ನುತ್ತಾ ಅವುಗಳನ್ನು ಓಡಿಸಿಕೊಂಡು ಬಂದರು... ಇದುಅಂತಹಒಂದುಉದಾಹರಣೆ ಮಾತ್ರ. ಮಾಟಿ, ರಂಟಿ, ಚೆಂಡು, ಬುಗುರಿ, ಪಂಜು, ನೇಗಿಲು, ನೊಗ ಇಂತಹಗ್ರಾಮೀಣ ಶಬ್ದಗಳು ಚಟಪಟಗೊಳ್ಳುತ್ತವೆ. ಪಾಲಿಗೆ ಬಂದದ್ದೇ ಪಂಚಾಮೃತ, ಮಕ್ಕಳಿಲ್ಲದಿದ್ದರೆ ಒಂದುಚಿಂತೆ, ಇದ್ದರೆ ನಾನಾ ಚಿಂತೆ, ಶಿವನ ಇಚ್ಛೆ, ಕಲ್ಲಿನ ಹಲ್ಲಿ ನುಡಿದ ಶಕುನ, ಬಿಳಿಮೂತಿ ಜನ, ಮಂತ್ರ ಹೇಳಿದ್ರೆ ಮಾವಿನಕಾಯಿ ಉದುರುತ್ತಾ ನಾನು ಗಂಡ್ಸು ಮಗ ಇದೇನಲೇ, 'ಹಮ್ಮಾಡಿ ಬ್ರಹ್ಮಕೆಟ್ಟ, ನಮ್ಮಗೌಡ ಸುಮ್‌ಸುಮ್ನೆಕೆಟ್ಟ' ಇಂತಹಜಾನಪದ ನುಡಿಗಟ್ಟುಗಳು ಸಂದರ್ಭೋಚಿತವಾಗಿ ಸೂರೆಗೊಂಡಿವೆ. ಕವಿವಾಣಿಗಳು, ಸೂಕ್ತಿಗಳು ಎಡೆಎಡೆಯಲ್ಲಿ ಹರಡಿಕೊಂಡಿವೆ.

ನಾಗರಿಕತೆಯ ನೆರಳೂ ಬೀಳದ ಗ್ರಾಮಗಳಲ್ಲಿ, ರೇಡಿಯೋ ಟಿ.ವಿ ಗಳು ಇಲ್ಲದಕಾಲದ ನಾಗರಿಕ ಪ್ರಜ್ಞೆ ಬೆಳೆದದ್ದು, ಸುದ್ದಿ ಪ್ರಸಾರವಾಗುತ್ತಿದ್ದುದು ಹೇಗೆ? ಈ ಕುತೂಹಲದ ಪ್ರಶ್ನೆಗೆಉತ್ತರ ಈ ಕಾದಂಬರಿಯಲ್ಲಿದೆ. ಹರಿಕಥೆ, ಶಿವಕಥೆಗಳ ಮೂಲಕ ಗಂಡ–ಹೆಂಡಿರ ಸಂಭಾಷಣೆಯಲ್ಲಿ (ಬಸವಣ್ಯಪ್ಪ ದಂಪತಿಗಳು, ಅಮಲ್ದಾರ್‌ಚನ್ನಕೃಷ್ಣಯ್ಯ ದಂಪತಿಗಳು) ಹೆಂಗಸರ ಲೋಕಾಭಿರಾಮದ ಹರಟೆಯಲ್ಲಿ, ಹೀಗೆ ಇಡೀದೇಶದ ಸುದ್ದಿ ಹರಡುತ್ತಾ ಹೋಗುತ್ತಿದ್ದಚಿತ್ರ ಈ

ಕಾದಂಬರಿಯಲ್ಲಿದೆ.ರಾಷ್ಟ್ರವ್ಯಾಪಿಯಾದಕ್ರಾಂತಿಯ ಬೆಂಕಿ, ಚೆನ್ನಕೃಷ್ಣಯ್ಯನಂತ ಮುಗ್ಧ ಆದರ್ಶ ಅಧಿಕಾರಿಗಳನ್ನು ಹೇಗೆ ಬಲಿತೆಗೆದುಕೊಂಡಿತುಎಂಬುದನ್ನು ಲೇಖಕರು ಮರೆತಿಲ್ಲ. ಅಮಲ್ದಾರರು ಹಾಗೂ ಅವರ ಪತ್ನಿ ತುಳಸಮ್ಮನವರ ಸಂಭಾಷಣೆ, ಕಣ್ಣರಿಯದ ಸಂಗತಿಯನ್ನು ಕರುಳು ಅರಿತುತವಕಿಸುವಚಿತ್ರಣತುಂಬಾ ಹೃದ್ಯವಾಗಿ ಮೂಡಿಬಂದಿದೆ. ಕುಲಕರ್ಣಿಯಂತಹಖದೀಮರುಇನ್ಸ್‌ಪೆಕ್ಟರ್‌ಕಂಚೇಗೌಡರಂತಹದರ್ಪಿಷ್ಟತಲೆತಿರುಕರು, ಬಸವಣ್ಣಪ್ಪರಂತಹ ಭೂಮಿಯತೂಕದ ಹಿರಿಯರು.ವೈವಿಧ್ಯಮಯ ಪಾತ್ರಗಳು ಇಲ್ಲಿವೆ. ಅದೊಂದು ಪುಟ್ಟ ಪ್ರಪಂಚವೇ ಸರಿ.ಸಾಹೇಬರುಈಸೂರಿಗೆ ಹೊರಟಾಗಕೆನೆಯುತ್ತಾ ಹಟಮಾಡುವಕುದುರೆಯೂಒಂದು ಹೃದಯಂಗಮ ಪಾತ್ರ.ನಾಲ್ಕಾರು ವಾಕ್ಯಗಳಲ್ಲೇ ಸಶಕ್ತವಾಗಿ ಚಿತ್ರಣವಾಗಿಬಿಡುತ್ತದೆ.

ಈಸೂರಿನ ಅಧಿಕಾರಿಗಳು ಕಾಲಿಡದಂತೆ ಸುತ್ತಲ ಹಳ್ಳಿಗಳಿಂದ ಮನೆಗಿಷ್ಟು ಆಳು ಎಂಬಂತೆ ರಸ್ತೆಗಳನ್ನು ಗುಂಡಿಗೊಳಿಸುವುದು, ಸೇತುವೆಗಳನ್ನು ಕತ್ತರಿ –ಸುವುದು, ಮರಗಳನ್ನು ಬೀಳಿಸಿ ರಸ್ತೆಗೆಅಡ್ಡವಾಗಿಸುವುದುಇತ್ಯಾದಿ ಕಾರ್ಯತಂತ್ರಗಳು ನಮ್ಮ ಸ್ವತಂತ್ರ ಚಳವಳಿಯ ವಿಶಿಷ್ಟ ರೂಪವನ್ನು ಇಂದಿನ ಎಳೆಯರಿಗೆ ಮನದಟ್ಟು ಮಾಡಿಕೊಡುತ್ತದೆ.ಸೇಡು ತೀರಿಸಿಕೊಳ್ಳಲೆಂದೇ ಈಸೂರಿಗೆ ದಾಳಿಯಿಟ್ಟ ಪೋಲೀಸರ ಹಿಂದಿನ ಉತ್ಪಾತತನವನ್ನು ಲೇಖಕರು ವರ್ಣಿಸಿದ್ದಾರೆ.

"ಸಾಲುಸಾಲಾಗಿ ಮೈಲಿಯುದ್ದಕ್ಕೂ ಹಬ್ಬಿದ್ದ ಪೋಲೀಸರ ಪಡೆರಾಕ್ಷಸರ ಸೇನೆಯಂತೆ ಮುನ್ನಡೆಯಿತು.ಎದೆಯ ಮೇಲೆ ಚಮ್ಮಟಿಕೆಯಿಂದ ಬಡಿದಂತೆ ಕೇಳಿಬರುತ್ತಿತ್ತು ಬೂಟುಗಳ ಸಪ್ಪಳ.ಸುತ್ತಲ ಹಳ್ಳಿಗಳಲ್ಲಿದ್ದ ಜನ ಭಯದಿಂದ ಬಾಗಿಲು ಮುಚ್ಚಿಕೊಂಡರು.ಚಿಕ್ಕಮಕ್ಕಳುಕಿಟಾರನೆಕಿರುಚಿ ಒಳಗೋಡಿದವು. ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದವರುಓಡಿಹೋಗಿಅವಿತುಕೊಂಡರು. 'ಬೌವ್ ಬೌವ್' ಎಂದು ಬೊಗಳುತ್ತಾ ನಾಯಿಗಳು ಸಿಕ್ಕಿದತ್ತ ಓಡಿದವು.ದನಕರುಗಳು ಗೂಟಕಿತ್ತುಕೊಂಡುಚದುರಿ ಹೋದವು…" ಇದುಒಂದುಉದಾಹರಣೆಯಷ್ಟೇ.ಇಂತಹ ಬಣ್ಣನೆಗಳನ್ನು ಮುಂದಿನ ಪುಟ (99) ಗಳಲ್ಲಿ ನೋಡಬಹುದು.

ಇಂತಹಕಲಾತ್ಮಕತೆಯು, ಕಾದಂಬರಿಯಉದ್ದಕ್ಕೂ ಸಿದ್ಧಿಸಿದೆ ಎಂದು ಹೇಳಲಾಗುವುದಿಲ್ಲ. ವಿಶೇಷವಾಗಿಈಸೂರಿನ ಮೇಲೆ ಸರ್ಕಾರದ ಪ್ರತೀಕಾರದ

ನಂತರದಟ್ಟವಾದ ವಿವರಗಳ ಹೊಡೆತದಲ್ಲಿಕಾದಂಬರಿಯುಕೊಚ್ಚಿ ಹೋಗುವಂತಿದೆ.ಪ್ರಾಯಶಃ ಈ ಕೃತಿಯಗಾತ್ರದ ಮಿತಿಇದಕ್ಕೆಕಾರಣವಿರಬಹುದು.ಲೇಖಕರಿಗೂ ಸಹ ಇದರಅರಿವುಂಟು.ಬಹಳ ಬೇಗ ಎಚ್ಚೆತ್ತುಕೊಳ್ಳುತ್ತಾರೆ.ಉದಾಹರಣೆಗೆ ಪುಟ 111 ರಿಂದ 120 ರವರೆಗಿನ ನಿರೂಪಣೆ, ಹಾಗೂ ವಾದ ವಿವರಗಳ ನಂತರದ 121 ನೆಯ ಪುಟ 'ಮೂಡಣ ಸಂಭ್ರಮ' ಎಂಬಲ್ಲಿ ಭಾಷೆಕಾವ್ಯಮಯವಾಗುತ್ತಾ ಹೋಗುತ್ತದೆ.ಭಾವಗಳ ತುಡಿತಗಳ ಹೃದ್ಯವಾದ ಬಣ್ಣನೆಯಿದೆ. ಹಾಗೆಯೇ ಪುಟ 125 ರಿಂದ 133 ರವರೆಗಿನ ವರದಿ, ಸೂರ್ಯನಾರಾಯಣಾಚಾರಿಯ ಪತ್ನಿಗೋವಿಂದಮ್ಮ ಮಹಾರಾಜರನ್ನುಅಡ್ಡಗಟ್ಟಿ ಅಹವಾಲು ಹೇಳಿಕೊಳ್ಳುವುದು, ದೊರೆಗಳ ಅಂತಃಕರಣ, ಅಸಹಾಯಕತೆ ಮುಂತಾದ ಚಿತ್ರಣಗಳು ಕಲಾತ್ಮಕತೆಗೆ ಸಾಕ್ಷಿಯಾಗಿವೆ.

ಕಾದಂಬರಿಯುಆರಂಭವಾಗುವುದು ವೀರಭದ್ರದೇವಾಲಯದ ಪರಿಸರದಲ್ಲಿ.ಈಸೂರಿನ ಹೆದ್ದೈವದ ಸಾಕ್ಷಿಯಲ್ಲಿ.ಕಥೆಯ ಬಂಡಿ ಆಗಾಗ ಸುತ್ತಲ ಹಳ್ಳಿಗಳು, ಶಿಕಾರಿಪುರ, ಶಿವಮೊಗ್ಗ ಕಡೆಗೆ ಬೆಂಗಳೂರುಗಳತ್ತ ಹರಿದರೂ ಪುನಃ ಅಂತ್ಯದಲ್ಲಿ ವೀರಭದ್ರದೇವರಗುಡಿಗೇ ಹಿಂತಿರುಗುತ್ತದೆ.ಅಲ್ಲಿಯೇ ಸ್ವತಂತ್ರ ಭಾರತದ ಮಂಗಳ ಘೋಷ, 1942

ರಆಗಸ್ಟ್‌ಕ್ರಾಂತಿಯಿಂದಆರಂಭವಾಗುವಕಥೆಯುಆದರ್ಶದ ಸಫಲತೆಯಲ್ಲಿ ಮುಕ್ತಾಯಗೊಳ್ಳುತ್ತದೆ.ಹೀಗೆ ಕಾದಂಬರಿಯುಕ್ರಿಯೈಕ್ಯ, ಕಾಲೈಕ್ಯ, ಸ್ಥಳೈಕ್ಯಗಳ ಬಿಗುವನ್ನು ಸಾಧಿಸಿಕೊಂಡಿದೆ.ಇದು ಮುಖ್ಯವಾಗಿ ಗಮನಿಸಬೇಕಾದ ಅಂಶ. ಈ ಕಾಲಾವಧಿಯಲ್ಲಿ "ಬಸವರಾಜರ ಬರವಣಿಗೆ, ಆರಂಭದಲ್ಲಿ ಪತ್ರಿಕಾ ವರದಿಯಂತೆತೋರಿದರೂಕಥೆ ಬೆಳೆದಂತೆಲ್ಲಾ ಒಂದು ಹದಕ್ಕೆ ಬಂದು ನಿಲ್ಲುತ್ತದೆ.ಶೈಲಿ ಸರಳವಾಗಿದ್ದು, ಆಡು ಮಾತು, ರೂಢಿ ಮಾತುಗಳ ಸಮಯೋಚಿತ ಬಳಕೆಯಿಂದ ಮನೋಜ್ಞವಾಗಿದೆ".

ಆದರ್ಶದ ಸಾಧನೆ, ಸಿದ್ಧಿಗಳ ನಡುವೆ ನಡೆದುಹೋದ ಘಟನೆಗಳ ರೋಮಾಂಚಕತೆ, ಬಲಿದಾನ, ಸ್ವಾರ್ಥ ತ್ಯಾಗಗಳ ಮಿಡಿತವನ್ನೂಇದು ಒಳಗೊಂಡಿದೆ. ಮಲೆನಾಡಿನ ಮೂಲೆಯಒಂದು ಪುಟ್ಟಗ್ರಾಮದಲ್ಲಿಐವರುತರುಣರ ಬಲಿದಾನ, ಈರ್ವರು ಅಧಿಕಾರಿಗಳ ಕೊಲೆ, ಗ್ರಾಮೀಣ ಮಹಿಳೆಯರ ಸಂಘಟನೆ, ಪ್ರತಿ ಸರ್ಕಾರದ ಸ್ಥಾಪನೆ, ತರುಣ ಹೃದಯಗಳಲ್ಲಿನ ಉತ್ಸಾಹ, ಉಲ್ಬಣಗಳ ಕೋಲಾಹಲ, ಇವು ಉಸಿರು ಬಿಗಿಹಿಡಿದುಓದುವ ವಿವರಗಳಾಗಿವೆ,

ಇಂದಿನ ತರುಣರಿಗೆ, ವಿಶೇಷವಾಗಿ ಈ ತಲೆಮಾರಿನ ವಿದ್ಯಾರ್ಥಿಗಳಿಗೆ ಅಗತ್ಯವಾದಆಹಾರ, ಕಾಲ ಪುರುಷನ ಕರಾಳ ಗರ್ಭದಲ್ಲಿಅಡಗಿ ಹೋದ ಈ ಸಂಗತಿಗಳನ್ನು ಅನಾವರಣಗೊಳಿಸುತ್ತದೆ.

**ಅಡಿಟಿಪ್ಪಣಿಗಳು:–**


1. ಮರುಳಸಿದ್ಧಪ್ಪ, ಕೆ., ನಾಗರಾಜ, ಕಿ.ರಂ.: ಸಂ. ವಚನ ಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು, 2012, ಪು. 10, ವ.35.
2. ಬಸವರಾಜು, ಎಲ್.: ಸಂ. ಅಲ್ಲಮನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.118, ವ.271.
3. ಬಸವರಾಜು, ಎಲ್.: ಸಂ.ಬಸವ ವಚನಾಮೃತ ಭಾಗ–2, ಬಸವ ಸಮಿತಿ, ಬೆಂಗಳೂರು, 1989, ಪು.102.
4. ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.76, ವ.170.
5. ಜೈನಕೇರಿ, ಜಯದೇವಪ್ಪ: ತುರುಗಾಹಿರಾಮಣ್ಣ, ಬಸವ ಸಮಿತಿ, ಬೆಂಗಳೂರು, 2010, ಪು.17.
6. ಮರುಳಸಿದ್ಧಪ್ಪ, ಕೆ., ನಾಗರಾಜ, ಕಿ.ರಂ.: ಸಂ. ವಚನ ಕಮ್ಮಟ, ಸಪ್ನ ಬುಕ್ ಹೌಸ್, 2012 ಪು.118, ವ.449.
7. ಬಸವರಾಜು, ಎಲ್.: ಸಂ. ಬಸವ ವಚನಾಮೃತ ಭಾಗ–2, ಬಸವ ಸಮಿತಿ, ಬೆಂಗಳೂರು, 1989, ಪು.110, ವ.105.
8. ಕಲಬುರ್ಗಿ, ಎಂ.ಎಂ.: ಸಂ.ಬಸವಯುಗದ ವಚನ ಮಹಾಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016, ಪು.745.
9. ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.124, ವ.370.